ಗೌರವ ₹8.5 ಲಕ್ಷ ಪ್ರಶಸ್ತಿ ಪಡೆದ ಮಹಿಳಾ ಸಂಘ ಎಂಬ ಕೀರ್ತಿ

ವಿಶ್ವಸಂಸ್ಥೆ ಪ್ರತಿಷ್ಠಿತ ಪ್ರಶಸ್ತಿಗೆ ಹುಬ್ಬಳ್ಳಿ ಬೀಬಿ ಫಾತಿಮಾ ಸಂಘ ಭಾಜನ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಜೀವ ವೈವಿಧ್ಯ ಸಂರಕ್ಷಣಾ ಕ್ಷೇತ್ರದ ನೊಬೆಲ್ ಎಂದೇ ಪ್ರಸಿದ್ಧಿ ಪಡೆದಿರುವ ಯುಎನ್‌ಡಿಪಿ (ವಿಶ್ವಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ) ನೀಡುವ 'ಈಕ್ವೇಟರ್‌ಇನಿಷಿಯೇಟಿವ್' ಪ್ರಶಸ್ತಿಗೆ ಧಾರವಾಡ ಜಿಲ್ಲೆ ಕುಂದಗೋಳ ತಾಲೂಕಿನ ತೀರ್ಥ ಗ್ರಾಮದ ಬೀಬಿ ಫಾತಿಮಾ ಮಹಿಳಾ ಸಂಘ ಪಾತ್ರವಾಗಿದೆ. ಪ್ರಶಸ್ತಿ ಮೊತ್ತ 10 ಸಾವಿರ ಡಾಲರ್ (₹8.5 ಲಕ್ಷ). ದೇಶದಲ್ಲಿಯೇ ಇಷ್ಟೊಂದು ಮೊತ್ತದ ಪ್ರಶಸ್ತಿ ಪಡೆದ ಮಹಿಳಾ ಸಂಘ ಎಂಬ ಕೀರ್ತಿಗೆ ಸಂಘ ಪಾತ್ರವಾಗಿದೆ.

'ನಿಸರ್ಗ ಆಧಾರಿತ ತಾಪಮಾನ ನಿಯಂತ್ರಣಕ್ಕೆ ಮಹಿಳೆ ಹಾಗೂ ಯುವಜನರ ನಾಯಕತ್ವ' ಎಂಬ ವಿಷಯ ಆಧರಿಸಿ ನಡೆದ ಈ ವರ್ಷದ ಪ್ರಶಸ್ತಿ ಆಯ್ಕೆ ಪ್ರಕ್ರಿಯೆಯಲ್ಲಿ ಭಾರತ, ಆರ್ಜೆಂಟೀನಾ, ಬ್ರೆಝಿಲ್, ಪೆರು, ಇಂಡೋನೇಷ್ಯಾ, ಕೆನ್ಯಾ, ತಾಂಜಾನಿಯಾ, ಈಕ್ವೆಡಾರ್‌ಸೇರಿದಂತೆ 103 ದೇಶಗಳ ಸುಮಾರು 700ಕ್ಕೂ ಅಧಿಕ ಸ್ಪರ್ಧಿಗಳು ಪಾಲ್ಗೊಂಡಿದ್ದರು. ಇದರಲ್ಲಿ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ತೀರ್ಥ ಗ್ರಾಮದ 'ಬೀಬಿ ಫಾತಿಮಾ ಮಹಿಳಾ ಸಂಘ'ಈ ಅತ್ಯುನ್ನತ ಪುರಸ್ಕಾರಕ್ಕೆ



ಭಾಜನವಾಗಿದೆ.ಪ್ರಶಸ್ತಿಯನ್ನು ಅಕ್ಟೋಬರ್ 9ರಂದು ಬ್ರೆಜಿಲ್‌ನಲ್ಲಿ ಆನ್‌ಲೈನ್ ಮೂಲಕ ಪ್ರದಾನ ಮಾಡಲಾಗುತ್ತಿದೆ. ಬಳಿಕ ದೆಹಲಿಯಲ್ಲಿರುವ ಯುಎನ್‌ಡಿಪಿ ಸಂಸ್ಥೆ ಮೂಲಕ ಕಾರ್ಯಕ್ರಮ ಹಮ್ಮಿಕೊಂಡು ಮತ್ತೊಮ್ಮೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಮಳೆಯಾಶ್ರಿತ ಜಮೀನುಗಳಲ್ಲಿ ಪರಿಸರ ಸ್ನೇಹಿ ಕೃಷಿ ವಿಧಾನ ಅಳವಡಿಕೆ, ಸಮುದಾಯ ಬೀಜ ಬ್ಯಾಂಕ್, ಆಹಾರ- ಪೋಷಕಾಂಶ ಭದ್ರತೆ, ಸಿರಿಧಾನ್ಯ ಬೇಸಾಯ, ಸಂಸ್ಕರಣಾ ಘಟಕ ನಿರ್ವಹಣೆ, ಮೌಲ್ಯವರ್ಧನೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ.

ನಿರ್ಧಾರ ಸೆಪ್ಟೆಂಬರ್‌ನಿಂದ ನೋಂದಣಿ ಪ್ರಕ್ರಿಯೆಗೆ ಚಾಲನೆ: ಚಲುವ

ಈ ವರ್ಷ ಕನಿಷ್ಠ ಬೆಂಬಲ ಬೆಲೆ ಅಡಿ 14 ಬೆಳೆಗಳ ಖರೀದಿಗೆ ತೀರ್ಮಾನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಬೆಲೆ ಸ್ಥಿರೀಕರಣ ಸಮಿತಿ ಎಂಎಸ್‌ಪಿ ಯೋಜನೆಯಡಿ 2025-26ನೇ ಸಾಲಿನಲ್ಲಿ ರೈತರು ಬೆಳೆದ 14 ಬೆಳೆಗಳನ್ನು ಕನಿಷ್ಠ ಬೆಂಬಲ ಬೆಲೆಯಡಿ ಖರೀದಿಸಲು ತೀರ್ಮಾನಿಸಿದೆ. ಅದರಂತೆ ಉತ್ಪನ್ನಗಳ ಖರೀದಿ ಸಂಬಂಧ ಸೆಪ್ಟಂಬರ್‌ನಲ್ಲಿ ನೋಂದಣಿ ಪ್ರಕ್ರಿಯೆ ಶುರುವಾಗುತ್ತದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಬಾರಿ ಬೆಳೆ ಕಟಾವು ಮಾಡಿದ ತಕ್ಷಣವೇ ಖರೀದಿ ಪ್ರಕ್ರಿಯೆ ನಡೆಸುವುದರಿಂದ ರೈತರ ಬೆಳೆಗಳಿಗೆ ಮಾರುಕಟ್ಟೆ ಖಾತರಿ ಆರಂಭದಲ್ಲೇ ಸಿಗಲಿದೆ. ರಾಜ್ಯದ ಸುಮಾರು 7 ಲಕ್ಷಕ್ಕೂ ಅಧಿಕ ರೈತರಿಂದ 15 ಲಕ್ಷ ಮೆಟ್ರಿಕ್ ಟನ್ ಉತ್ಪನ್ನಗಳನ್ನು ₹8 ಸಾವಿರ ಕೋಟಿ ವೆಚ್ಚದಲ್ಲಿ ಖರೀದಿಸಲಾಗುತ್ತದೆ ಎಂದರು. ಪ್ರಸಕ್ತ ಸಾಲಿನಲ್ಲಿ 6 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಸಲು ಉದ್ದೇಶಿಸಲಾಗಿದೆ. ಪ್ರತಿ ಕ್ವಿಂ.ಗೆ ₹2,369 ನೀಡಿ 3 ಲಕ್ಷ ಮೆಟ್ರಿಕ್ ಟನ್ ಭತ್ತ ಖರೀಸುತ್ತೇವೆ. ಸಿರಿಧಾನ್ಯಗಳಾದ ನವಣೆ, ಸಾಮೆ, ಹಾರಕ ಧಾನ್ಯಗಳನ್ನು ಪ್ರತಿ ಕ್ವಿಂ.ಗೆ 4,886 ಎಂಎಸ್‌ಪಿ ದರ, ರಾಜ್ಯ ಸರ್ಕಾರದ ₹114 ಉತ್ತೇಜನ ಸೇರಿ 5 ಸಾವಿರಕ್ಕೆ ಮಿತಿ ಇಲ್ಲದೇ ಖರೀದಿಸಲಾಗುವುದು ಎಂದರು.

ರಾಗಿ ಬ್ಯಾಂಡ್

ಈ ಇಡೀ ದೇಶದಲ್ಲೇ ಅತಿಹೆಚ್ಚು ರಾಗಿ ಬೆಳೆಯುವುದು ಕರ್ನಾಟಕ ರಾಜ್ಯದಲ್ಲಿ. ಪ್ರತಿ ವರ್ಷ 13 ಲಕ್ಷ ಮೆಟ್ರಿಕ್ ಟನ್ ರಾಗಿ ಉತ್ಪಾದಿಸಲಾಗುತ್ತಿದೆ. ಅಂತೆಯೆ 63 ಲಕ್ಷ ಟನ್ ಭತ್ತ, 8 ಲಕ್ಷ ಟನ್ ಜೋಳ ಬೆಳೆಯಲಾಗುತ್ತಿದೆ. ಎಂಎಸ್‌ಪಿ ದರದಲ್ಲಿ ಖರೀದಿಸುವ ಬಹುತೇಕ ರಾಗಿ ಪಡಿತರ ವಿತರಣೆಗೆ ಹೋಗುತ್ತಿದೆ. ರಾಗಿಗೆ ಬೇಡಿಕೆ ಇರುವುದರಿಂದ ಎಂಎಸ್‌ಪಿ ದರದಲ್ಲಿ ಖರೀದಿಸುವ ರಾಗಿಯನ್ನು ಮುಂದಿನ ದಿನಗಳಲ್ಲಿ ಬ್ರ್ಯಾಂಡ್ ಮಾಡಿ ಮಾರಾಟದ ಚಿಂತನೆ ಇದೆ.

Kannadaprabha pg 06

ಇದು ಎಲೆಗಳ ಕಥೆ ವಿವಿಧ ಕಂಪನಿಗಳಲ್ಲಿ 13 ವರ್ಷ ಉದ್ಯೋಗ ಮಾಡಿದ ಸುದೇಶ್ ನಾಯಕ್ ಕೈ ಹಿಡಿದ ಹಣ್ಣು ಪುಡಿ ಮಾಡುವ ಉದ್ಯಮ | ಡೆಂಘೀ ಕಾಯಿಲೆಗೆ ರಾಮಬಾಣ ಪಪ್ಪಾಯಿ ಎಲೆಗಳಿಗೂ ಭಾರೀ ಬೇಡಿಕೆ ಸೃಷ್ಟಿ

ಕಲ್ಲಂಗಡಿ ಬೆಲೆ ಹೆಚ್ಚಿಸಿರೋ ಪೌಡರ್, ಪಪ್ಪಾಯಿ ಎಲೆಗೂ ಡಿಮ್ಯಾಂಡ್!

ಇಷ್ಟು ದಿನ ಕೇಳದ ಕತೆಗಳಿಗಿಂತ ಇದು ಭಿನ್ನ -ವಿಭಿನ್ನವಾಗಿದೆ. ವಿಶೇಷವಾಗಿದೆ. ತಿನ್ನಲು ಎಲ್ಲರೂ ಇಷ್ಟಪಡುವ ಕೆಂಪು ಕಂಪಾದ ಕಲ್ಲಂಗಡಿಯ ಪೌಡರ್‌ಮಾಡಿ ಮಾರುವ ಉದ್ಯಮ ಬೆಳೆದು ನಿಂತ ಕತೆ ಇದು. ಕಾರವಾರ ತಾಲೂಕಿನಲ್ಲಿರುವ ಕಾವೇರಿ ಆಗ್ರೋ ಕಂಪನಿ ಕಟ್ಟಿ ಬೆಳೆಸುತ್ತಿರುವ ಸುದೇಶ್ ಕೊಯ್ರ, ನಾಯಕ್ ಈ ಕತೆಯ ನಾಯಕ.





ಸರ್ಕಾರದ ಸಹಕಾರ ಉದ್ಯಮಕ್ಕೆ ಶ್ರೀಕಾರ 27

ಸುದೇಶ್ ಕೊಯ್ರ ನಾಯಕ್, ಅನೇಕ ಔಷಧ ಕಂಪನಿಗಳಲ್ಲಿ 13 ವರ್ಷ ಕೆಲಸ ಮಾಡಿದ್ದರು. ಗೋವಾ, ಬೆಂಗಳೂರು, ಅಂಕೋಲದ ಕಂಪನಿಗಳಲ್ಲಿ ಕೆಲಸ ಮಾಡುತ್ತಾ ಪಡೆದ ಅನುಭವ ಸ್ವಂತದ್ದು. ಮಾಡಲು ಪ್ರೇರಣೆಯಾಯಿತು. ಸ್ವಂತದ್ದು ಮಾಡಲು ಕೆಲಸ ಬಟ್ಟು ಮೇಲೆ ಲಾಂಡ್ರಿಯಿಂದ ಆರಂಭಿಸಿ ಅನೇಕ ಸ್ವಂತ ಉದ್ಯಮ ಮಾಡಲು ಪ್ರಯತ್ನಿಸಿದ್ದರು. ಆದರೆ, ಅವರಿಕ್ಕೆ ಹಿಡಿದದ್ದು ಹಣ್ಣು ಪುಡಿಯಾಗಿಸೋ ಉದ್ಯಮ.

ಔಷಧ ಉತ್ಪಾದನೆಗೆ ಪೌಡರ್: ಮೂರು ವರ್ಷಗಳ ಹಿಂದೆ ಕರ್ನಾಟಕ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮದಿಂದ ಪಿಎಂಎಫ್‌ಎಂಇ ಯೋಜನೆಯಡಿ ₹34 ಲಕ್ಷ ಸಾಲ ಪಡೆದು ಕಾವೇರಿ ಆಗ್ರೋ ಹೆಸರಿನಲ್ಲೇ ಕಂಪನಿ ಮತ್ತು ಉತ್ಪನ್ನ ಶುರು ಮಾಡಿದರು. ತಾವೇ 3 ಎಕರೆಯಲ್ಲಿ ಬೆಳೆದ ಕಲ್ಲಂಗಡಿಯನ್ನೂ ಸೇರಿಸಿ ರೈತರಿಂದ ನೇರ ಖರೀದಿಸಿ ಸ್ವೇ ಡ್ರೈ ತಾಂತ್ರಿಕತೆ ಬಳಸಿ ಕಲ್ಲಂಗಡಿ ಹಣ್ಣಿನ ರಸವನ್ನು ಪೌಡರ್‌ಮಾಡುತ್ತಿದ್ದೇವೆ. ಇದಕ್ಕೆ ಔಷಧ ಉತ್ಪಾದನೆ ಮತ್ತು ಆಯುರ್ವೇದ ವೈದ್ಯದಲ್ಲಿ ಭಾರೀ ಬೇಡಿಕೆ ಇದೆ. ಜೊತೆಗೆ ಅನೇಕ ಆಹಾರ ಉದ್ಯಮಗಳು ನಮ್ಮಿಂದ ಹಣ್ಣಿನ ಪುಡಿ ಪಡೆಯುತ್ತಿವೆ ಎಂದು ಕಾವೇರಿ ಆಗ್ರೋ ಸಂಸ್ಥಾಪಕರಾದ ಸುದೇಶ್ ಕೊಯ್ರ ನಾಯಕ್, ಕನ್ನಡಪ್ರಭಕ್ಕೆ ವಿವರಿಸಿದರು.

ಪಪ್ಪಾಯಿ ಎಲೆ ಬೇಕು: ಮಾವಿನಹಣ್ಣನ್ನು ಸಹ ಪುಡಿ ಮಾಡಿ ಬಳಸಬಹುದು. ಜಾಕೋಲೆಟ್, ಐಸ್‌ಕ್ರೀಮಿಗೂ ಇದನ್ನು ಬಳಸಬಹುದು. ಚಿಕ್ಕೂ ಪೌಡರಿಗೂ ಬೇಡಿಕೆ ಇದೆ. ಡೆಂಘೀ ಸಂಬಂಧಿತ ಔಷಧ ಕಂಪನಿಯೊಂದು ಪಪ್ಪಾಯಿ ಎಲೆಯ ಉತ್ಪನ್ನಕ್ಕಾಗಿ ಬೇಡಿಕೆ ಇಟ್ಟಿದೆ. ಆದರೆ, ಇದಕ್ಕೆ ಬೇಕಾಗುವ ಪಪ್ಪಾಯಿಯ ಹಸಿ ಎಲೆ ಸಿಗುತ್ತಿಲ್ಲ. ಪಪ್ಪಾಯಿ ಬೆಳೆಯುವ ರೈತರು ಇದ್ದರೆ ಅಥವಾ ಬೆಳೆಯುವ ಆಸೆ ಇದ್ದವರು ನಮ್ಮನು ಸಂಪರ್ಕಿಸಿದರೆ ಪಪ್ಪಾಯಿ ಹಣ್ಣು ಮತ್ತು ಎಲೆ ಖರೀದಿಸಲು ಸಕಲ ರೀತಿಯ ನೆರವು ನೀಡಲಿದ್ದೇವೆ. ಅದನ್ನು ಕೊಂಡುಕೊಳ್ಳುವ ಖಚಿತ ಒಪ್ಪಂದ ಮಾಡಿಕೊಳ್ಳಲಿದ್ದೇವೆ. ಪಪ್ಪಾಯಿ ಎಲೆಯನ್ನು ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿ ತರಬೇಕು. ಡೆಂಘೀಗೆ ಪರಿಣಾಮಕಾರಿ ಔಷಧ ಎಂದೇ ಗುರುತಿಸಿಕೊಂಡಿರುವ ಪಪ್ಪಾಯಿ ಎಲೆ ಕೊಳ್ಳಲು ಸಿದ್ಧವಿದ್ದೇವೆ ಎಂದರು ಸುದೇಶ್.

8 ಜನರಿಗೆ ಉದ್ಯೋಗ ನೀಡಿರುವ ಕಾವೇರಿ ಆಗ್ರೋ ಕಳೆದ ವರ್ಷ ₹20 ಲಕ್ಷ ವಹಿವಾಟು ನಡೆಸಿದೆ. ನಾನು ಔಷಧ ಕಂಪನಿಗಳಲ್ಲಿ ಕೆಲಸ ಮಾಡುವಾಗ ಆಗಿರೋ ನೇಹ, ಪರಿಚಯಗಳು ಮಾರ್ಕೆಟಿಂಗ್ ಕೆಲಸಕ್ಕೆನೆರವಾಗಿದೆ. ಯಾವುದೇ ರೀತಿಯ ಹಣ್ಣನ್ನು ಪುಡಿಯಾಗಿಸಿ ಕೊಡುವ ತಾಂತ್ರಿಕತೆ ನಮ್ಮಲ್ಲಿದೆ. 1 ಟನ್ ಉತ್ಪಾದನಾ ಸಾಮರ್ಥ್ಯವನ್ನು 5 ಟನ್ನಿಗೆ ಹೆಚ್ಚಿಸುವ ಗುರಿ ಹೊಂದಿದ್ದೇನೆ. ಯಾವುದೇ ಹಣ್ಣಿನಬೆಳೆಗಾರರು ಮುಂಚಿತವಾಗಿ ಬಂದಲ್ಲಿ ಅವರ ಹಣ್ಣು ನಮಗೆ ಅಗತ್ಯ ಇದ್ದರೆ ಖರೀದಿಸಲು ಹಿಂಜರಿಯುವುದಿಲ್ಲ ಎಂದರು.

ನಾವುಮಾಡುವ ಉತ್ಪನ್ನಗಳು ಸಾಮಾನ್ಯರ ದಿನನಿತ್ಯದ ನೇಮ ಅಗತ್ಯ ಇರುವುದಿಲ್ಲ. ಆದರೆ ಅನೇಕ ಆಲೋಚನೆ ಮತ್ತು ಆಯುರ್ವೇದ ಔಷಧಗಳಿಗೆನಮ್ಮ ಉತ್ಪನ್ನಗಳೇ ಬೇಕು. ನಾವು ಹೆಚ್ಚಾಗಿ ದೊಡ್ಡ ದೊಡ್ಡ ಔಷಧ ಕಂಪನಿಗಳ ಜೊತೆಗೇ ವ್ಯವಹಾರ ಮಾಡುತ್ತಿದ್ದೇವೆ. ಗಿಡಮೂಲಿಕೆಗಳರಸ ಮತ್ತು ಪೌಡರ್ ಎರಡೂ ಉತ್ಪನ್ನಗಳನ್ನು ಸಿದ್ಧಪಡಿಸಲು ನಾವು ಸಿದ್ಧವಿದ್ದೇವೆ. ನಾವು ಯಾವುದೇ ರಾಸಾಯನಿಕ ಬಳಸದೆ ಹಣ್ಣಿನ ರಸವನ್ನು ಪುಡಿಯಾಗಿ ಪರಿವರ್ತನೆ ಮಾಡಬಲ್ಲೆವು. ಇವನ್ನು ಎರಡರಿಂದ ಎರಡೂವರೆ ವರ್ಷದವರೆಗೂ ಕೆಡದಂತೆ ಇಡಬಹುದು. ಈ ವರ್ಷ ಮತ್ತಷ್ಟು ಆರ್ಡರ್ ಬರುವ ನಿರೀಕ್ಷೆಯಲ್ಲಿದೇನೆ. ದೇಹದ ತೂಕ ಇಳಿಸುವ ಉತ್ಪನ್ನವನ್ನು ಸಿದ್ಧಪಡಿಸಲು ಯೋಚನೆ ನಡೆದಿದೆ ಎಂದೂ ಸುದೇಶ್ ಹೇಳಿದರು.

ಹಣ್ಣು ಖರೀದಿಗೆ ಸಿದ್ಧ: ಮೊದ ಮೊದಲಿಗೆ ಹೆಗಪ್ಪ ಅನ್ನೋ ಭಯವಿತ್ತು. ಆದರೆ, ಇದರ ಉದ್ಯಮಿಗಳ ಪರಿಚಯ ಇದ್ದಿದ್ದರಿಂದ ಮಾರ್ಕೆಟಿಂಗ್‌ಗೆ ಅನುಕೂಲವಾಗಿದೆ. ಕೃಷಿ ಇಲಾಖೆಯ ನೋಡಲ್ ಅಧಿಕಾರಿ ಸುಜಯ್ ಭಟ್ ಅವರ ಮಾರ್ಗದರ್ಶನದಲ್ಲಿ ಇದನ್ನು ಶುರು ಮಾಡಿಯಶಸ್ವಿಯಾಗಿದ್ದೇನೆ. ಹಣ್ಣು ಬೆಳೆಯುವ ರೈತರು ಕಾವೇರಿ ಆಗ್ರೋ ಸಂಪರ್ಕಿಸಿ ಹಣ್ಣು ಮಾರಿ ಹೆಚ್ಚಿನ ಲಾಭ ಪಡೆಯಬಹುದು. ಕಪೆಕ್ ಅಧಿಕಾರಿಗಳು ವಿವಿಧ ಮೇಳಗಳಲ್ಲಿ ನೀಡಿದ ಉಚಿತ ಮಳಿಗೆಯ ಅವಕಾಶದಿಂದ ಅನೇಕ ಅವಕಾಶಗಳು ಒದಗಿ ಬಂದಿವೆ. ಕಪೆಕ್ ಯಂತ್ರೋಪಕರಣಕ್ಕೆ ಸಾಲ ನೀಡುತ್ತದೆ. ಉತ್ಪಾದನಾ ಘಟಕಗಳ ನಿರ್ವಹಣೆಗೂ ಸಾಲ ನೀಡಿದರೆ ಅನುಕೂಲ ಆಗುತ್ತದೆ ಎಂದೂ ಕಾವೇರಿ ಆಗ್ರೋದ ಸುದೇಶ್ ಸ್ಪಷ್ಟಪಡಿಸಿದರು.

ಕಾವೇರಿ ಆಗ್ರೋ ಉತ್ಪನ್ನಗಳಿಗಾಗಿ ಅಥವಾ ಹಣ್ಣು ಪಪ್ಪಾಯಿ ಮಾರುವವರು ಸಂಪರ್ಕಿಸಿ
9480517060

15 ಲಕ್ಷ ರು. ಸಬ್ಸಿಡಿ ಪಡೆಯಿರಿ

ಕೆರುಆಹಾರಸಂಸ್ಕರಣಾಉದ್ಯಮಗಳಿಗೆ ರಾಜ್ಯ ಸರ್ಕಾರ 9 ಲಕ್ಷ ಹಾಗೂ ಕೇಂದ್ರ ಸರ್ಕಾರ 6 ಲಕ್ಷ ಸೇರಿ ಒಟ್ಟು 15 ಲಕ್ಷ ರು. ವರೆಗೂ ಸಹಾಯಧನ ದೊರೆಯಲಿದೆ. ಹೊಸ ಉದ್ಯಮ ಆಥವಾ ಉದ್ಯಮ ವಿಸ್ತರಣೆಗೂ ಯೋಜನೆಯಲ್ಲಿ ಅವಕಾಶವಿದೆ. ಬೆಲ್ಲ ತಯಾರಿಕೆ ಸೇರಿದಂತೆ 200ಕ್ಕೂ ಹೆಚ್ಚು ಉತ್ಪನ್ನಗಳು ಲಾಭ ಪಡೆಯಬಹುದು. ಆಹಾರ ಉದ್ಯಮಿಗಳಾಗಲು ಸಾಲ ಸಬ್ಸಿಡಿ ಪಡೆಯಲು ಹಾಗೂ ಮತ್ತಿತರ ವಿವರಗಳಿಗಾಗಿ ಕಪೆಕ್ ಹೆಲ್ಪ್‌ಲೈನ್ ಸಂಪರ್ಕಿಸಿ - 080 - 22271192 & 22271193. ಕೆಲಸದ ದಿನಗಳಂದು ದು ಬೆಳಿಗ್ಗೆ 10.30 ರಿಂದ ಸಂಜೆ 4ರ ವರೆಗೆ ಸಂಪರ್ಕಿಸಿ. www.kappec.karnataka.gov.in ನಲ್ಲೂ ಲಭ್ಯ.

Kannadaprabha pg 07

Hosadiganta pg 08

ಉಂಡೆ ಕೊಬ್ಬರಿ ಬೆಲೆ ಭಾರೀ ಕುಸಿತ: ಆತಂಕ


ಎಚ್.ಬಿ.ಸುಪ್ರತೀಕ್ ಹಳೇಮನೆ

ಬಿಗಿಂತ ವಿಶೇಷ

• **ತುಮಕೂರು:** ಕೊಬ್ಬರಿ ಮಾರುಕಟ್ಟೆಯೂ ಷೇರು ಮಾರುಕಟ್ಟೆಯಂತೆ ಆಗಿದ್ದು ಇತ್ತೀಚಿನ ಕೆಲ ವಾರಗಳಿಂದ ಉಂಡೆಕೊಬ್ಬರಿ ಬೆಲೆಯೂ ಗಣನೀಯವಾಗಿ ಕುಸಿತ ಕಂಡಿದ್ದು ರೈತರು ಆತಂಕಕ್ಕೆ ಒಳಗಾಗಿದ್ದಾರೆ.

ತಿಪಟೂರು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಗುರುವಾರ ಗರಿಷ್ಠ ದರ ಕ್ವಿಂಟಾಲ್‌ಗೆ 26,500ಕ್ಕೆ ಇಳಿಕೆ ಆಗಿದೆ. ಕನಿಷ್ಠ 24,000, ಮಾದರಿ 25,500 ಕ್ಕೆ ಟೆಂಟರ್ ಆಗಿದೆ. ಮಾರುಕಟ್ಟೆಗೆ 1,186 ಕ್ವಿಂಟಾಲ್ (4,224 ಚೀಲ) ಉಂಡೆ ಕೊಬ್ಬರಿ ಆವಕವಾಗಿತ್ತು.

ಒಂದು ವಾರದ ಅಂತರದಲ್ಲಿ ಕ್ವಿಂಟಾಲ್‌ಗೆ 1,606, ಒಂದು ಟೆಂಡರ್ ಅಂತರದ ಹರಾಜಿಗೆ 1 ಸಾವಿರ ರೂ ಕಡಿಮೆಯಾಗಿದೆ. ಒಂದು ತಿಂಗಳ ಅಂತರದಲ್ಲಿ ಕ್ವಿಂಟಾಲ್‌ಗೆ 5 ಸಾವಿರ ರೂ ಕುಸಿತ



ಕಂಡಂತಾಗಿದೆ. ಕ್ವಿಂಟಾಲ್ ಬೆಲೆ 31,606ಕ್ಕೆ ಏರಿಕೆಯಾಗುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿತ್ತು. ಜೂನ್ ತಿಂಗಳ ಕಡೆಯವರೆವಿಗೂ ಬೆಲೆಯೂ ಸತತವಾಗಿ ಏರಿಕೆ ಆಗುತ್ತಲೇ ಇತ್ತು. ನಂತರದ ದಿನಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಇಳಿಕೆಯಾಗಿ, ಜುಲೈ ತಿಂಗಳ ಮಧ್ಯದ ವೇಳೆಗೆ 28 ಸಾವಿರದಿಂದ 30 ಸಾವಿರದ ನಡುವೆ ಮಾರಾಟವಾಗುತ್ತಿತ್ತು. ಕೆಲ ದಿನಗಳಿಂತೂ 2 ಸಾವಿರದ ಆಸುಪಾಸಿನಲ್ಲಿಯೇ ಸ್ಥಿರತೆಯನ್ನು ಕಂಡುಕೊಂಡಿತ್ತು. ಇದರಿಂದಾಗಿ ಬೆಲೆ ಸ್ಥಿರತೆ ಕಂಡುಕೊಳ್ಳುವ ಸಾಧ್ಯತೆಯಿದೆ ಎಂದು ರೈತರು,ವರ್ತಕರು, ದಲ್ಲಾಳಿಗಳು ಭಾವಿಸಿದ್ದರು.

ಆದರೆ ಮಾರುಕಟ್ಟೆಯ ಲೆಕ್ಕಾ ಬಲ್ಲವರಾರು ಜುಲೈ ತಿಂಗಳ ಮಧ್ಯ ಭಾಗದಿಂದಲೇ ಬೆಲೆ ಕುಸಿತ ಪ್ರಾರಂಭವಾಗಿ ಆಗಸ್ಟ್ ತಿಂಗಳಿನಲ್ಲಿಯೂ ನಿಲ್ಲುವಂತೆ ಕಾಣುತ್ತಿಲ್ಲ. ಮುಂದಿನ ದಿನಗಳಲ್ಲಿ 25 ಸಾವಿರಕ್ಕೆ ಸ್ಥಿರವಾಗಬಹುದು ಎಂಬುದು ಕೆಲವಾರ ವಾದವಾಗಿದೆ. ಆದರೆ ವರ್ತಕರುಗಳು ಇದಕ್ಕಿಂತ ಕುಸಿತ ಕಾಣುವ ಸಾಧ್ಯತೆ ಇದೆ ಎಂದು ಅಂದಾಜಿಸಿದ್ದಾರೆ.

ಈ ಹಿಂದೆ ಉಂಡೆ ಕೊಬ್ಬರಿಗೆ ಇದ್ದ ಹೆಚ್ಚಿನ ಬೇಡಿಕೆಯ ಹಿನ್ನೆಲೆ ದರವೂ ಏಕೆಯತ್ತ ಸಾಗಿತ್ತು. ಕಳೆದ ಮಾರ್ಚ್‌ನಿಂದ ಜೂನ್ ಕೊನೆಯವರೆಗೆ ಗೂಳಿಯಂತೆ ಸಾಗಿದ್ದ ಬೆಲೆ ಕರಡಿಯ ನೃತ್ಯಕ್ಕೆ ನಲುಗಿದ್ದು ರೈತರ ಆತಂಕ ಹೆಚ್ಚಾಗಿದೆ.

ಈಗಾಗಲೇ ಒಂದು ಹಂತದವರಗೆ ಬೆಲೆ ಇಳಿಕೆ ಕಂಡಿದ್ದು, ರೈತರ ಬಳಿ ಇರುವಂತಹ ಕೊಬ್ಬರಿಯೂ ಕೇಳದವಾರು ಕಡಿಮೆ ಆಗಿದ್ದು ಮುಂದಿನ ದಿನಗಳಲ್ಲಿ ಯಾವುದೇ ವ್ಯತ್ಯಾಸಗಳು ಕಾಣುವುದಿಲ್ಲ, ಅತ್ಯಂತ ಕಡಿಮೆ ಏರಿಳಿತವನ್ನು ನಿರೀಕ್ಷಿಸಬಹುದು ಹೊರತು ಕುಸಿಯುವ ಸಾಧ್ಯತೆ ಕಡಿಮೆ ಆಗಬಹುದು ಎನ್ನುವುದು ಮಾರುಕಟ್ಟೆ ವಿಶ್ಲೇಷಕರ ವಾದವಾಗಿದೆ. ಇದರಿಂದಾಗಿ ರೈತರು ಬೆಲೆ ಇಳಿಕೆಯ ಆತಂದದಲ್ಲಿ ಇದ್ದು ಕೊಬ್ಬರಿಯನ್ನು ಮಾರುಕಟ್ಟೆಗೆ ತರಲು ಆತುರತೆ ತೋರಿಸುತ್ತಿದ್ದಾರೆ.

ಕ್ವಿಂಟಲ್ ಭತ್ತಕ್ಕೆ ₹2369 ಕನಿಷ್ಠ ಬೆಂಬಲ ಬೆಲೆ ನಿಗದಿ: ಕೃಷಿ ಸಚಿವ

ಬೆಂಗಳೂರು: 2025-26ನೇ ಸಾಲಿನಲ್ಲಿ ರೈತರು ಬೆಳೆದ 14 ಬೆಳೆಗಳನ್ನು ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ)ಯಡಿ ಖರೀದಿಸಲು ಸರ್ಕಾರ ತೀರ್ಮಾನಿಸಿದೆ ಎಂದು ಕೃಷಿ ಸಚಿವ ಚಲುವರಾಯ ಸ್ವಾಮಿ ಹೇಳಿದರು. ವಿಧಾನ ಸೌಧದಲ್ಲಿ ಶುಕ್ರವಾರ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ 3 ಲಕ್ಷ ಮೆಟ್ರಿಕ್ ಟನ್ ಭತ್ತವನ್ನು ಪ್ರತಿ ಕ್ವಿಂಟಲ್‌ಗೆ 2,369 ರೂ.ನಂತೆ ಖರೀದಿಸಲಾಗುವುದು ಎಂದರು. ▶ ವಿವರ: 10

ಕ್ವಿಂಟಾಲ್ ಭತ್ತಕ್ಕೆ 2,369 ರೂ. ಕನಿಷ್ಠ ಬೆಂಬಲ ಬೆಲೆ ನಿಗದಿ

ರಾಗಿ, ಜೋಳ ಸೇರಿದಂತೆ ಒಟ್ಟು 14 ಬೆಳೆ ಎಂಎಸ್‌ಪಿಯಡಿ ಖರೀದಿ ನೋಂದಣಿ ಪ್ರಕ್ರಿಯೆಗೆ ಸೆಪ್ಟೆಂಬರ್‌ನಲ್ಲಿ ಚಾಲನೆ: ಚಲುವರಾಯ ಸ್ವಾಮಿ

■ ಉದಯವಾಣಿ ಸಮಾಚಾರ

ಬೆಂಗಳೂರು: 2025-26ನೇ ಸಾಲಿನಲ್ಲಿ ರೈತರು ಬೆಳೆದ 14 ಬೆಳೆಗಳನ್ನು ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ)ಯಡಿ ಖರೀದಿಸಲು ಸರ್ಕಾರ ತೀರ್ಮಾನಿಸಲಾಗಿದ್ದೆ ಎಂದು ಕೃಷಿ ಸಚಿವ ಚಲುವರಾಯ ಸ್ವಾಮಿ ಹೇಳಿದರು.

ವಿಧಾನ ಸೌಧದಲ್ಲಿ ಶುಕ್ರವಾರ ಮಾತನಾಡಿ, ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಬೆಲೆ ಸ್ಥಿರೀಕರಣ ಸಮಿತಿ ಎಂಎಸ್‌ಪಿ ಯೋಜನೆಯಡಿ ಖರೀದಿ ಪ್ರಕ್ರಿಯೆ ನಡೆಯಲಿದೆ. ಉತ್ಪನ್ನಗಳ ಖರೀದಿ ಸಂಬಂಧ ನೋಂದಣಿ ಪ್ರಕ್ರಿಯೆಗೆ ಸೆಪ್ಟೆಂಬರ್‌ನಲ್ಲಿ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ರಾಜ್ಯದ ಸುಮಾರು 7 ಲಕ್ಷಕ್ಕೂ ಅಧಿಕ ರೈತರಿಂದ 15 ಲಕ್ಷ ಮೆಟ್ರಿಕ್ ಟನ್ ಉತ್ಪನ್ನಗಳನ್ನು ಸುಮಾರು 8 ಸಾವಿರ ಕೋಟಿ ರೂ. ವೆಚ್ಚದಲ್ಲಿ ಖರೀದಿಸಲು ಉದ್ದೇಶಿಸಲಾಗಿದೆ. ಇದರಿಂದ ರಾಜ್ಯದ ರೈತರ ಹಾಗೂ ಗ್ರಾಮೀಣ ಆರ್ಥಿಕತೆ ಸದೃಢವಾಗಲಿದೆ. ಈ ಬಾರಿ ಬೆಳೆ ಕಾಟವು ಮಾಡಿದ ತಕ್ಷಣವೇ ಖರೀದಿ ಪ್ರಕ್ರಿಯೆ ನಡೆಸುವುದರಿಂದ ರೈತರ ಬೆಳೆಗಳಿಗೆ ಮಾರುಕಟ್ಟೆ ಖಾತರಿ ಆರಂಭದಲ್ಲೇ ಸಿಗಲಿದೆ ಎಂದು ವಿವರಿಸಿದರು.

ರೈತರಿಂದ ಭತ್ತ ಖರೀದಿ: ಪ್ರಸಕ್ತ ಸಾಲಿನಲ್ಲಿ 3 ಲಕ್ಷ ಮೆಟ್ರಿಕ್ ಟನ್ ಭತ್ತವನ್ನು ಪ್ರತಿ ಕ್ವಿಂಟಾಲ್‌ಗೆ 2,369 ರೂ.ನಂತೆ ಖರೀದಿಸಲಾಗುವುದು. ಪ್ರತಿ ರೈತರಿಂದ ಎಕರೆಗೆ 25 ಕ್ವಿಂಟಾಲ್‌ನಂತೆ ಗರಿಷ್ಠ ಮಿತಿ ಇಲ್ಲದೇ 2025ರ ಸೆಪ್ಟೆಂಬರ್-ನವೆಂಬರ್‌ವರೆಗೆ ನೋಂದಣಿಗೆ ಅವಕಾಶ ಕಲ್ಪಿಸಲಾಗುವುದು. 2025ರ ನವೆಂಬರ್‌ನಿಂದ 2026ರ ಜನವರಿ ವರೆಗೆ ಖರೀದಿಸಲಾಗುವುದು. ಅಂತೆಯೆ 3 ಲಕ್ಷ ಮೆಟ್ರಿಕ್ ಟನ್ ಬಿಳಿಜೋಳವನ್ನು ಪ್ರತಿ ಕ್ವಿಂಟಾಲ್‌ಗೆ 3,669 ರೂ ನಂತೆ ಮತ್ತು ಪ್ರತಿ ಎಕರೆಗೆ 15 ಕ್ವಿಂಟಾಲ್‌ನಂತೆ ಗರಿಷ್ಠ 150 ಕ್ವಿಂಟಾಲ್ ಖರೀದಿಸಲಾಗುವುದು. ಇದಕ್ಕೆ 2025ರ ಅಕ್ಟೋಬರ್‌ನಿಂದ 2026ರ ಮಾರ್ಚ್ ವರೆಗೆ ನೋಂದಣಿಗೆ ಅವಕಾಶವಿದೆ. 2025ರ ಡಿಸೆಂಬರ್‌ನಿಂದ 2026ರ ಮಾರ್ಚ್ ವರೆಗೆ ಖರೀದಿ ಪ್ರಕ್ರಿಯೆ ನಡೆಯಲಿದೆ ಎಂದರು.

ಮಧ್ಯವರ್ತಿಗಳು ಈ ಎಂಎಸ್‌ಪಿ ಯೋಜನೆಯ ಲಾಭ ಪಡೆಯುವುದನ್ನು ತಪ್ಪಿಸುವ ಉದ್ದೇಶದಿಂದ ಕರ್ನಾಟಕ ರಿಮೋಟ್ ಸೆನ್ಸಿಂಗ್ ಏಜೆನ್ಸಿಯಿಂದ ಉಪಗ್ರಹ ಛಾಯಾಚಿತ್ರ ಪಡೆದು ಬೆಳೆ ಸಮೀಕ್ಷೆ ವರದಿಯೊಂದಿಗೆ ತಾಳೆ ಮಾಡಿ ನೈಜ ರೈತರಿಗೆ ಯೋಜನೆ ಲಾಭ ತಲುಪಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿದರು.

765 ಕೋಟಿ ಬಾಕಿ ಹಣ ರೈತರಿಗೆ ಪಾವತಿ: ಪ್ರತಿ ವರ್ಷ ರಾಜ್ಯದಲ್ಲಿ 13 ಲಕ್ಷ ಮೆಟ್ರಿಕ್ ಟನ್ ರಾಗಿ ಉತ್ಪಾದಿಸಲಾಗುತ್ತಿದೆ. ದೇಶದಲ್ಲಿ ಅತಿ ಹೆಚ್ಚು ರಾಗಿ ಬೆಳೆಯುವ ರಾಜ್ಯ ಕರ್ನಾಟಕವಾಗಿದೆ. ಅಂತೆಯೆ 63 ಲಕ್ಷ ಮೆಟ್ರಿಕ್ ಟನ್ ಭತ್ತ, 8 ಲಕ್ಷ ಮೆಟ್ರಿಕ್ ಟನ್ ಜೋಳ ಬೆಳೆಯಲಾಗುತ್ತಿದೆ. ಎಂಎಸ್‌ಪಿ ದರದಲ್ಲಿ ಈ ಹಿಂದೆ ಖರೀದಿಸಿದ್ದ ರಾಗಿ, ಜೋಳದ ಬಾಕಿ 765 ಕೋಟಿ ರೂ. ಹಣವನ್ನು ವರಮಹಾಲಕ್ಷ್ಮೀ ಹಬ್ಬದ ದಿನವೇ ಡಿಬಿಟಿ ಮುಖಾಂತರ ರೈತರ ಖಾತೆಗೆ ಜಮೆ ಮಾಡಲಾಗಿದೆ ಎಂದು ತಿಳಿಸಿದರು.

ಇದೇ ಮೊದಲ ಬಾರಿಗೆ ಸಿರಿಧಾನ್ಯ ಖರೀದಿ

ಈ ಇದೇ ಮೊದಲಿಗೆ ರಾಜ್ಯದಲ್ಲಿ ಸಿರಿಧಾನ್ಯಗಳಾದ ನವಣೆ, ಸಾಮೆ, ಹಾರಕ ಇನ್ನಿತರ ಧಾನ್ಯಗಳನ್ನು ಪ್ರತಿ ಕ್ವಿಂಟಾಲ್‌ಗೆ 4,886 ಎಂಎಸ್‌ಪಿ ದರ, ರಾಜ್ಯ ಸರ್ಕಾರದ 114 ರೂ. ಉತ್ತೇಜನ ಮೊತ್ತ ಸೇರಿ ಒಟ್ಟು 5 ಸಾವಿರ ರೂ.ಗೆ ಮಿತಿ ಇಲ್ಲದೇ ಖರೀದಿಸಲಾಗುವುದು. ಈ ಸಾಲಿನಲ್ಲಿ 6 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಗೆ ತೀರ್ಮಾನಿಸಲಾಗಿದೆ. ಪ್ರತಿ ರೈತರಿಂದ ಎಕರೆಗೆ 10, ಗರಿಷ್ಠ 50 ಕ್ವಿಂಟಾಲ್ ರಾಗಿಯನ್ನು ಎಂಎಸ್‌ಪಿ ದರ 4,886 ರೂ.ವರೆಗೆ ಖರೀದಿ ಮಾಡಲಾಗುವುದು. 2025ರ ಸೆಪ್ಟೆಂಬರ್‌ನಿಂದ 2026ರ ಮಾರ್ಚ್ ವರೆಗೆ ನೋಂದಣಿಗೆ ಅವಕಾಶ, ಜನವರಿ 2026ರಿಂದ ಮಾರ್ಚ್ ವರೆಗೆ ಖರೀದಿಗೆ ನಿರ್ಣಯಿಸಲಾಗಿದೆ ಎಂದು ಹೇಳಿದರು.

ಎಂಎಸ್‌ಪಿ ದರ ಮಾಹಿತಿ ಪ್ರತಿ ಕ್ವಿಂಟಾಲ್

ಬೆಳೆ	ಕಳೆದ ವರ್ಷ ದರ	ಪ್ರಸಕ್ತ ವರ್ಷ ಹೆಚ್ಚಳ	ದರ ಹೆಚ್ಚಳ
ಭತ್ತ(ಗ್ರೇಡ್ ಎ)	2320	2389	69
ಭತ್ತ(ಸಾಮಾನ್ಯ)	2300	2369	69
ಜೋಳ(ಮಾಲ್ದಂಡಿ)	3371	3749	378
ಮೆಕ್ಕೆಜೋಳ	2225	2400	175
ರಾಗಿ	4290	4886	596
ಜೋಳ(ಹೈಬ್ರಿಡ್)	3371	3699	328
ಸಜ್ಜೆ	2625	2755	130
ಶೇಂಗಾ	6783	7263	480
ಸೂರ್ಯಕಾಂತಿ	7280	7721	441
ಸೋಯಾಬೀನ್	4892	5328	436
ತೊಗರಿ	7550	8000	450
ಹೆಸರು	8682	8768	86
ಉದ್ದು	7400	7800	400
ಹುಚ್ಚೆಳ್ಳು	8717	9537	820
ಹತ್ತಿ(ಮಧ್ಯಮ ಎಳೆ)	7121	7710	589
ಎಳ್ಳು	9267	9846	579

Udayavani Pg 01

ಬೆಂಡೆಕಾಯಿಯ ಒಡಲಲ್ಲಿ

• ಬಸವರಾಜ ಕೆ.ಜಿ.

ಹೆಣ್ಣಿನ ಬೆರಳಿನಂತೆ ತೆಳ್ಳಗೆ ಬಳುಕುವ ಬೆಂಡೆಕಾಯಿ 'ಲೇಡೀಸ್ ಫಿಂಗರ್' ಅಂತಲೇ ಖ್ಯಾತಿ. ನೋಡಲು ಹಸಿರಾಗಿರುವ ಬೆಂಡೆ ಬಹಳ ತಾಜಾವೇನೋ ಎಂದೆನ್ನಿಸಿದರೂ, ಇದರ ಕೀಟ ಬಾಧೆ ನಿಯಂತ್ರಣಕ್ಕಾಗಿ ಹೇರಳವಾಗಿ ರಾಸಾಯನಿಕ ಬಳಸಲಾಗುತ್ತಿದೆ. ಇದರಿಂದಾಗಿ ಬೆಂಡೆಕಾಯಿ ತನ್ನಲ್ಲಿನ ಎಲ್ಲ ಆರೋಗ್ಯ ಪೂರಕ ಅಂಶಗಳನ್ನು ಕಳೆದುಕೊಂಡು, ನಮ್ಮ ತಟ್ಟೆಗೆ ಬೀಳುತ್ತಿರುವುದು ಆತಂಕಕಾರಿ.

ವೈರಾಣು ವಿರುದ್ಧ ಬೆಂಡೆ ಯುದ್ಧ

ಉಷ್ಣಾಂಶ ಹೆಚ್ಚಿದಷ್ಟೂ ಬೆಂಡೆಗೆ ಬಾಧಿಸುವ ನಂಜಾಣು ರೋಗ (ಯೆಲ್ಲೋ ವೈನ್ ಮೊಸಾಯ್ಕ್ ವೈರಸ್- ವೈವಿಎಂವಿ) ನಿಯಂತ್ರಿಸಲು ಇಮಿಡಾಕ್ಲೋಪ್ರಿಡ್ ಮತ್ತು ಥಿಯಾಮೆಥಾಕ್ಸಮ್ ಎಂಬ ಅಂತರವ್ಯಾಪಿ ಕೀಟನಾಶಕಗಳನ್ನು ಬಳಸುತ್ತಾರೆ. ಈ ರಾಸಾಯನಿಕ ಒಂದು ಎಲೆ ಮೇಲೆ ಬಿದ್ದರೂ ಸಾಕು ಸ್ಯದ ಎಲ್ಲ ಅಂಗಗಳಿಗೂ ವ್ಯಾಪಿಸುವುಷ್ಟು ಪರಿಣಾಮಕಾರಿ.



ಮಾರಣಾಂತಿಕ ಮ್ಯಾಲಿಕಲ್ ಗಳು ಬೆಂಡೆಕಾಯಿಯ ಒಡಲನ್ನು ಸೇರುವ ಜತೆಗೆ, ಮಣ್ಣಿನಲ್ಲಿ ಬೆರೆತು ಮಣ್ಣಿನ ಜೀವಿಗಳನ್ನು ಹಾಗೂ ಪರಿಸರಸ್ನೇಹಿ ಕೀಟಗಳನ್ನೂ ಕೊಲ್ಲುತ್ತಿವೆ. ಪ್ರತಿ ಬಾರಿ ನಾವು ಬೆಂಡೆಕಾಯಿ ಸೇವಿಸಿದಾಗ ಮಿಲಿಗ್ರಾಂಗಳ ಲೆಕ್ಕದಲ್ಲಿ ವಿಷ ದೇಹ ಸೇರುತ್ತಿದೆ. ಇವು ನಮ್ಮ ರೋಗನಿರೋಧಕ ಶಕ್ತಿಯನ್ನೇ ಕುಂದಿಸಬಲ್ಲವು. ಬೆಂಡೆ ಜತೆ ದೇಹ ಸೇರುವ ಇಮಿಡಾಕ್ಲೋಪ್ರಿಡ್ ರಾಸಾಯನಿಕವು ಕ್ಯಾನ್ಸರ್ ಹಾಗೂ ಪಾರ್ಕಿನ್ಸನ್ ರೋಗಗಳಿಗೂ ಕಾರಣವಾಗುತ್ತಿದೆ ಎನ್ನುತ್ತಾರೆ ತಜ್ಞರು.



ಸುರಕ್ಷಿತ ಸೇವನೆ ಹೇಗೆ?

ಬಿಸಿ ನೀರಿನಲ್ಲಿ ಉಪ್ಪು ಬೆರೆಸಿ, ಅದರೊಳಗೆ ಬೆಂಡೆಕಾಯಿಗಳನ್ನು 10ರಿಂದ 20 ನಿಮಿಷ ಕಾಲ ಹಾಗೇ ಬಿಡಬೇಕು. ಇದರಿಂದ ರಾಸಾಯನಿಕ ಅಂಶಗಳು ಬಿಡುಗಡೆಗೊಳ್ಳುತ್ತವೆ. ಬಳಿಕವಷ್ಟೇ ಬೆಂಡೆ ಸೇವನೆಗೆ ಸುರಕ್ಷಿತ. ಹಸಿ ಬೆಂಡೆ ಸೇವನೆ ಬದಲು ಬೇಯಿಸಿ ಸೇವಿಸುವುದು ಸೂಕ್ತ.

ಬೆಂಡೆಯಲ್ಲಿ ಏನಿದೆ?

ಬೆಂಡೆಯೊಳಗೆ ವಿಟಮಿನ್ ಸಿ ಮತ್ತು ಕೆ, ವಿಟಮಿನ್ ಬಿ9, ಮೆಗ್ನೀಷಿಯಂ, ಆಂಟಿಆಕ್ಸಿಡೆಂಟ್ಸ್, ಫೈಬರ್‌ಗಳಿವೆ. ರಕ್ತಹೀನತೆ ನಿವಾರಣೆ, ಕರುಳಿನ ಕ್ಯಾನ್ಸರ್ ತಡೆಯಲು, ಬುದ್ಧಿಶಕ್ತಿ ಚುರುಕುಗೊಳಿಸಲು, ದೃಷ್ಟಿಸುಧಾರಿಸಲು ಹಾಗೂ ಉತ್ತಮ ಜೀರ್ಣಕ್ರಿಯೆಗೆ ಬೆಂಡೆ ಒಳ್ಳೆಯದು.



ಬೆಂಡೆ ಬೆಳೆಗಾರರು ಕೆಂಪು ಹಟ್ಟಿ ಹೊಂದಿರುವ ಕೀಟನಾಶಕಗಳನ್ನು ಅತಿಯಾಗಿ ಬಳಸುತ್ತಾರೆ. ಸಾಮಾನ್ಯವಾಗಿ ತಜ್ಞರು ಕೆಂಪು ಹಟ್ಟಿ ಕೀಟನಾಶಕಗಳ ಬಳಕೆಗೆ ಸಲಹೆ ನೀಡುವುದಿಲ್ಲ, ಅಲ್ಲದೆ, ತಜ್ಞರ ಸಲಹೆಗಿಂತ ದುಪ್ಪಟ್ಟು ಪ್ರಮಾಣದಲ್ಲಿ ರಾಸಾಯನಿಕ ಬಳಸುವುದರಿಂದ ಬೆಂಡೆ ವಿಷಗೊಳ್ಳುತ್ತಿದೆ. ಕೀಟಗಳ ನಿಯಂತ್ರಣಕ್ಕೆ ರೈತರು ಮೋಹಕ ಬಲೆ, ಹಳದಿ ಮತ್ತು ನೀಲಿ ಅಂಟು ಹಟ್ಟಿ ಬಳಸಬೇಕು.

- ಡಾ.ಎಂ.ಜಿ. ಬಸವನಗೌಡ ತೋಟಗಾರಿಕೆ ವಿಜ್ಞಾನಿ, ದಾವಣಗೆರೆ

V-karantaka Pg 02

ಪಿಎಂ ಕಿಸಾನ್: ರಾಜ್ಯಕ್ಕೆ 15 ಸಾವಿರ ಕೋಟಿ ರೂ. ಹಂಚಿಕೆ

• **ಹೊಸದಿಲ್ಲಿ:** ಪ್ರಧಾನಮಂತ್ರಿ ಕಿಸಾನ್ ಸಮೃದ್ಧಿ ಯೋಜನೆಯಡಿ ಕರ್ನಾಟಕಕ್ಕೆ ಇದುವರೆಗೆ 15,127 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.



- ಪಿಎಂ-ಕಿಸಾನ್ ಯೋಜನೆಯಡಿ ರೈತರಿಗೆ ವರ್ಗ
- ರಾಜ್ಯಸಭೆಯಲ್ಲಿ ಮಾಹಿತಿ ನೀಡಿದ ಕೇಂದ್ರ ಸಚಿವ

2020ರಿಂದ ಇಲ್ಲಿವರೆಗೆ 43 ಲಕ್ಷಕ್ಕೂ ಹೆಚ್ಚು ರೈತರಿಗೆ ನಿಧಿ ಬಿಡುಗಡೆ ಮಾಡಲಾಗಿದೆ ಎಂದು ಕೃಷಿ ಖಾತೆಯ ರಾಜ್ಯ ಸಚಿವ ರಾಮನಾಥ್ ಠಾಕೂರ್ ಹೇಳಿದ್ದಾರೆ. ಕರ್ನಾಟಕದ ರಾಜ್ಯಸಭೆ ಸದಸ್ಯ ಲೇಹರ್ ಸಿಂಗ್ ಅವರ ಪ್ರಶ್ನೆಗೆ ಠಾಕೂರ್ ಉತ್ತರ ನೀಡಿದ್ದಾರೆ.

ಅಂದ ಹಾಗೆ, ಶುಕ್ರವಾರ ಕೂಡ ಕೇಂದ್ರ ಸರ್ಕಾರ ದೇಶದ ಎಲ್ಲ ಫಲಾನುಭವಿಗಳ ಖಾತೆಗೆ ನೇರವಾಗಿ 3.90 ಲಕ್ಷ ಕೋಟಿ ರೂ.ಗಳನ್ನು ವರ್ಗಾವಣೆ ಮಾಡಿದೆ. ಕರ್ನಾಟಕದಲ್ಲಿ ಏಪ್ರಿಲ್-ಜೂನ್ ತಿಂಗಳ ಕಂತಾಗಿ 877.32 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಯೋಜನೆ ಆರಂಭವಾದಾಗಿನಿಂದ ಇಲ್ಲಿವರೆಗೆ ಒಟ್ಟಾರೆಯಾಗಿ 20 ಕಂತುಗಳಲ್ಲಿ ರೈತರಿಗೆ ನೇರವಾಗಿ ಹಣ ವರ್ಗಾವಣೆ ಮಾಡಲಾಗಿದೆ. ಆ.8ರಂದು ರೈತರ ಖಾತೆಗೆ 20ನೇ ಕಂತಿನ ಹಣ ವರ್ಗಾವಾಗಿದೆ.

ಪ್ರತಿ ವರ್ಷ ರೈತರ ಸಹಾಯಕ್ಕಾಗಿ ಮೂರು ಕಂತುಗಳಲ್ಲಿ 6 ಸಾವಿರ ರೂ.ಗಳನ್ನು ಕೇಂದ್ರ ಸರ್ಕಾರ ಖಾತೆಗಳಿಗೆ ನೇರವಾಗಿ ವರ್ಗಾವಣೆ ಮಾಡುತ್ತಿದೆ.

Udayavani Pg 04


Why Indian farmers need to be shielded from imports

Among major items, India has imposed one of the highest tariffs on food product imports from the US as well as the rest of the world. In 2022, India's weighted average tariff for food imports from the US was 40.2%, and about 49% for the world combined. This is because international agricultural prices are artificially suppressed by heavy govt subsidies and Indian farmers, who constitute 44% of the country's workforce, can't compete. While subsidies pull down international prices, Indian prices also go up because of labour-intensive agriculture and lower yields, says **Atul Thakur**

Int'l Prices Are Cheaper Than Indian Farm Produce...

Of 13 major kharif crops, only four had lower prices in India compared to international rates in 2024. These were soya bean meal, rice, urad and groundnut. Rice and wheat prices remain stable in India because of the govt's free ration scheme

Domestic and international prices of major crops — Q4 2024 (Rs per quintal)





The price gap is the highest for soya bean oil with a quintal cheaper by ₹4,902 in the international market. A quintal of sunflower oil and sunflower seeds is ₹3,993 and ₹2,069 cheaper, respectively

...Because Yields Are Low...

Except wheat, groundnuts, pigeon peas (Tur/Arhar) and sugar cane, India's yield per hectare is the lowest among the top five producers for most major crops. It's not only advanced countries, middle- and low-income ones like Vietnam, Indonesia and Bangladesh have better rice yield than in India. Farmers in Ethiopia produce more chickpeas per hectare of land while Pakistan has a better cotton yield

> For us, the interest of our farmers is our top priority. India will never compromise on the interests of farmers, fishermen and dairy farmers — **PM Modi**



Production and yield of major crops (2023) — US, China and India

Yield in kg/ha, production in million tonnes

	Wheat	Maize (corn)	Rice	Chick peas, dry (gram)	Seed cotton, unginned
China	5,781	6,532	7,133	5,576	6,635
India	**3,521**	**3,545**	**4,322**	**1,172**	**1,269**
US	3,269	11,131	8,573	1,474	2,843

	Soya bean	Groundnut*	Rape/Colza/Mustard seed	Sugar cane	Pigeon peas (Arhar/Tur)*
China	1,953	3,973	2,162	80,258	Malawi 1,720
India	**1,145**	**2,076**	**1,428**	**83,349**	Tanzania 1,144
US	3,399	4,194	2,010	79,309	**India 814**

*Excluding shelled

*No data available for US, China. Showing top 3 producers

...And Farming Is Labour-Intensive

In UK and Germany, agriculture gives employment to only 1% of the workforce, while its share in gross value added (GVA) is less than 1%. In India, it employs 44% of the workforce and has a 16.4% share in GVA

Agriculture's share in employment and GVA



Source: Commission for Agricultural Costs & Prices, FAO, World Bank

Subsidies Are Common Globally; In India, They Are 'Negative', Shows OECD Data

Agricultural financial support — total estimates ($ bn), 2022



In 2022, China offered $310 billion worth of financial support to its agricultural sector, the world's highest. US, Japan, Korea and Brazil also pay heavy farm subsidies. On the other hand, OECD says that despite the subsidies provided by India, export restrictions negatively impact farmers as they lose $42 billion in potential profits because of them

Graphic: **Anil Panwar**

Since international prices are lowered by subsidies, Indian farmers have little scope to export, and zero tariffs will ruin Indian agriculture, cause massive unemployment and disrupt India's food security, making it more dependent on imports

Times of ind Pg 11

ಭರ್ಜರಿ ಬೆಲೆಗೆ 'ಕುಂಬಳ ಓಟ'

ರೈತರ ಬಳಿಯೇ ಕೆ.ಜಿಗೆ 12 ರೂ. ಧಾರಣೆ | ಉತ್ತರ ಭಾರತದ ಮಳೆ ನಮ್ಮ ರೈತರಿಗೆ ವರ

■ ಎಸ್.ಎಂ. ಸೋಮನಗೌಡ
ಜಗಳೂರು (ದಾವಣಗೆರೆ)
dvgeditor@gmail.com

ಕುಂಬಳಕಾಯಿ ತರಕಾರಿ ಬೆಳೆಯಲ್ಲೇ ರಾಜ ಎಂದೇ ಫೇಮಸ್. ಒಂದು ವರ್ಷಗಳವರೆಗೆ ಕಾಪಿಟ್ಟುಕೊಳ್ಳಬಹುದಾದ ಕುಂಬಳಕಾಯಿಗೆ ಬೆಲೆಯಿಲ್ಲದೇ ರೈತರು ಕಂಗಾಲಾಗಿದ್ದರು. ಆದರೆ, ಈಗ ಕೆ.ಜಿಗೆ 12 ರೂ.ಗೆ ಬೆಲೆ ಬಂದಿದ್ದು ರೈತರ ಮುಖದಲ್ಲಿ ಮಂದಹಾಸ ಮೂಡಿದೆ.

ಜಗಳೂರು ತಾಲೂಕಿನ ಬಿಳಿಚೋಡು ಹೋಬಳಿಯ ದೇವಿಕೆರೆ, ಗುತ್ತಿದುರ್ಗ, ಚಿಕ್ಕಆರಕೆರೆ, ದೊಡ್ಡ ಆರಕೆರೆ, ಹಾಲೇಕಲ್ಲು, ಬಿಸ್ತುವಳ್ಳಿ, ಬಿದರಕೆರೆ ಭಾಗದಲ್ಲಿ ರೈತರು ಅತಿ ಹೆಚ್ಚು ಕುಂಬಳ ಬೆಳೆ ಬೆಳೆಯುತ್ತಾರೆ. ಎಂಟು ದಿನಗಳ ಹಿಂದೆ ಮೂರ್ನಾಲ್ಕು ರೂ. ಕೆ.ಜಿಗೆ ಕೇಳುತ್ತಿದ್ದ ಮಧ್ಯವರ್ತಿಗಳು ಈಗ 12 ರೂ. ಬೆಲೆ ಕೊಟ್ಟು ಕೊಳ್ಳುತ್ತಿದ್ದಾರೆ. ಈಗಾಗಲೇ ಕಟಾವು ಶೇ.75ರಷ್ಟು ಮುಕ್ತಾಯವಾಗಿದ್ದು ಉಳಿದ ಶೇ.25ರಷ್ಟು ಮಾತ್ರ ಫಸಲು ಇದೆ. ಎಂಟು ದಿನಗಳ ಹಿಂದಷ್ಟೇ ಮಾರುಕಟ್ಟೆಯಲ್ಲಿ ಕೇಳೋರು ಇರಲಿಲ್ಲ. ಮಹಾರಾಷ್ಟ್ರದ ಪುಣೆ, ಕೋಲ್ಕತ್ತಾ, ಬೆಂಗಳೂರು ಮಾರುಕಟ್ಟೆಯಲ್ಲಿ ಸಾಕಷ್ಟು ಮಾಲು ಬಂದು ಬೀಳುತ್ತಿತ್ತು. ಆದರೆ, ಈಗ ಪೂರೈಕೆ ಕಡಿಮೆಯಿದೆ.



ಜಗಳೂರು ತಾಲೂಕಿನ ಚಿಕ್ಕಆರಕೆರೆ ಗ್ರಾಮದ ರೈತ ಪ್ರದೀಪ್ ಬೆಳೆದ ಕುಂಬಳಕಾಯಿ.

ಬೆಲೆ ಏರಿಕೆಗೆ ಕಾರಣ: ಇದ್ದಕ್ಕಿದ್ದ ಬೆಲೆ ಏರಿಕೆಗೆ ಮಳೆಯೂ ಕಾರಣ. ದಿಲ್ಲಿ, ಉತ್ತರಾಖಂಡ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ಸೇರಿದಂತೆ ಅನೇಕ ರಾಜ್ಯಗಳಲ್ಲಿ ವಿಪರೀತ ಮಳೆಯಾಗಿದ್ದು, ಅಲ್ಲಿನ ರೈತರು ಕುಂಬಳ ಕತ್ತರಿಸಲು ಆಗುತ್ತಿಲ್ಲ. ಜತೆಗೆ ಕೊಳೆತು ಹೋಗುತ್ತಿದ್ದು ಕೊಳ್ಳುವವರಿಗೆ ಗುಣಮಟ್ಟದ ಕುಂಬಳ ಸಿಗುತ್ತಿಲ್ಲ. ಹೀಗಾಗಿ ಕರ್ನಾಟಕದಲ್ಲಿ ಎಲ್ಲೆಲ್ಲಿ ಕುಂಬಳ ಬೆಳೆಯುವ ಪ್ರದೇಶಗಳನ್ನು ಹುಡುಕಿ ವ್ಯಾಪಾರಿಗಳು ಖರೀದಿಸಲು ಆರಂಭಿಸಿದ್ದಾರೆ. ಮಳೆ ಕಡಿಮೆ ಬೀಳುವ ಪ್ರದೇಶಗಳನ್ನು ಪತ್ತೆ ಹಚ್ಚಿ ಕುಂಬಳ ಕೊಳ್ಳಲು ಮಧ್ಯವರ್ತಿಗಳು ತಾಮುಂದು ನಾಮುಂದು ಎಂದು ಮುಗಿ ಬೀಳುತ್ತಿದ್ದಾರೆ.

ಹೊಲದಲ್ಲೇ ಡಿಮ್ಯಾಂಡ್

'ರೈತ ತನ್ನ ಹೊಲದಲ್ಲೇ ನಿಂತು ಕುಂಬಳದ ಫೋಟೊ, ವಿಡಿಯೊ ಕಳುಹಿಸಿದರೆ ಸಾಕು, ಮೊಬೈಲ್‌ನಲ್ಲೇ ಗುಣಮಟ್ಟ ನೋಡಿ ವ್ಯಾಪಾರ ಮುಗಿಸುವಷ್ಟು ಡಿಮ್ಯಾಂಡ್ ಬಂದಿದೆ. ಈಗಾಗಲೇ ಹೊಲಗಳಲ್ಲಿ ಕುಂಬಳ ಬೆಳೆ ಖಾಲಿಯಾಗುತ್ತಿದ್ದು, ಬೇಡಿಕೆಗೆ ತಕ್ಕಷ್ಟು ಪೂರೈಕೆಯಿಲ್ಲದೇ ವರ್ತಕರು ಹೊಲಗಳಿಗೆ ಬಂದು ಖರೀದಿಸುತ್ತಿದ್ದಾರೆ' ಎನ್ನುತ್ತಾರೆ ಚಿಕ್ಕರಕೆರೆಯ ಯುವ ರೈತ ಪ್ರದೀಪ್.

ದೇಶಾದ್ಯಂತ ಕುಂಬಳಕಾಯಿಗೆ ಬೇಡಿಕೆಯಿದೆ. ಅದರಲ್ಲೂ ಮಹಾನಗರಗಳಾದ ಬೆಂಗಳೂರು, ಮುಂಬಯಿ, ಹೊಸದಿಲ್ಲಿ, ಅಹಮದಾಬಾದ್‌ಗಳಲ್ಲಿ ಹೆಚ್ಚಾಗಿ ಹೋಟೆಲ್‌ಗಳಲ್ಲಿ ಪ್ರಧಾನ ತರಕಾರಿಯಾಗಿ ಕುಂಬಳ ಬಳಸುತ್ತಾರೆ. ಈಗಾಗಲೇ ದೇಶದ ನಾನಾ ಭಾಗಗಳಲ್ಲಿ ಕುಂಬಳ ಬೆಳೆ ಖಾಲಿಯಾಗಿದೆ. ಹೀಗಾಗಿ ದರ ಹೆಚ್ಚಾಗುತ್ತಿದೆ.
- ಅನಿಲ್‌ಕುಮಾರ್ ವ್ಯಾಪಾರಿ

V-karantaka Pg 08